'ಅಮೆರಿಕನ್ನರು ಎನ್ನುವುದರಲ್ಲಿ ಸಂಶಯವಿಲ್ಲ. ಇಷ್ಟೊಂದು ಗಲಾಟೆ ಎಬ್ಬಿಸುವವರು ಅವರಲ್ಲದೆ ಮತ್ಯಾರು?... ಅಂದ್ಹಾಗೆ ನೀವು ಅಮೆರಿಕನ್ ಅಲ್ಲ ತಾನೆ?' ಅವನು ನನ್ನೆಡೆಗೆ ನೋಡುತ್ತಾ ಹೇಳಿದ.

'ನಾನು ಅಮೆರಿಕನ್ ಅಲ್ಲ' ನಾನೆಂದೆ.

ಅಷ್ಟರಲ್ಲಿ ಈಜುಕೊಳದಿಂದ ಎದ್ದು ಬಂದ ಹುಡುಗನೊಬ್ಬ ನಮ್ಮ ಎದುರು ಬಂದು ನಿಂತ. ಅವನ ಪಕ್ಕದಲ್ಲಿ ಇಂಗ್ಲಿಷ್ ಹುಡುಗಿಯೊಬ್ಬಳು ಇದ್ದಳು. ಅವರ ಮೈಯಿಂದ ಇಳಿದ ನೀರು ಕಾಲಬುಡದಲ್ಲಿ ಜಮೆಯಾಗುತ್ತಲಿತ್ತು.

'ಈ ಕುರ್ಚಿಗಳು ಖಾಲಿ ಇವೆಯೇ?' ಹುಡುಗ ಕೇಳಿದ.

ನಾನು, ಹೌದೆಂಬಂತೆ ತಲೆಯಾಡಿಸಿದೆ.

'ನಾವು ಕುಳಿತುಕೊಳ್ಳಬಹುದೇ?'

'ಅವಶ್ಯವಾಗಿ.' ನಾನೆಂದೆ.

ಧನ್ಯವಾದಗಳನ್ನು ಹೇಳುತ್ತಾ ಅವರು ಕುಳಿತುಕೊಂಡರು. ಹುಡುಗನ ಕೈಯಲ್ಲಿ ಸುತ್ತಿಟ್ಟಿದ್ದ ಕರ್ಚೀಫಿತ್ತು. ಅವನು ಅದನ್ನು ಬಿಡಿಸಿದ. ಅದರಲ್ಲಿ ಸಿಗರೇಟು ಪ್ಯಾಕು ಮತ್ತು ಲೈಟರಿತ್ತು. ಅವನು ಸಿಗರೇಟನ್ನು ಹುಡುಗಿಯ ಕಡೆಗೆ ಒಡ್ಡಿದ. ಅವಳು ನಿರಾಕರಿಸಿದಳು. ನಮ್ಮತ್ತ ಒಡ್ಡಿದಾಗ ನಾನು ಸ್ವೀಕರಿಸಿದೆ. ಮುದುಕ ತಾನು ಸಿಗಾರ್ ಸೇದುವುದೆಂದ. ಅವನು ಸಿಗಾರ್ ಕೇಸನ್ನು ತೆರೆದು ಒಂದು ಸಿಗಾರನ್ನು ಹೊರಗೆಳೆದ. ಹಾಗೆಯೇ ಜೇಬುಚೂರಿಯನ್ನು ಹೊರ ತೆಗೆದು ಸಿಗಾರಿನ ತುದಿಯನ್ನು ನಾಜೂಕಾಗಿ ಕತ್ತರಿಸಿದ.

'ಅಂಕಲ್, ನಿಮ್ಮ ಸಿಗಾರಿಗೆ ನಾನು ಬೆಂಕಿ ಹತ್ತಿಸುತ್ತೇನೆ.' ಹುಡುಗ ತನ್ನ ಲೈಟರನ್ನು ಎತ್ತಿಕೊಂಡ.

'ಈ ಗಾಳಿಗೆ ನಿನ್ನ ಲೈಟರಿನಿಂದ ಏನೂ ಪ್ರಯೋಜನವಾಗದು.' ಮುದುಕ ನಗುತ್ತಾ ಹೇಳಿದ.

'ನನ್ನ ಲೈಟರ್ ಎಂತಹ ಗಾಳಿಗೂ ಹತ್ತುತ್ತದೆ ಅಂಕಲ್!' ಹುಡುಗನೆಂದ.

'ಯಾವಾಗಲೂ?' ಮುದುಕ ಕೆಣಕುವಂತೆ ವ್ಯಂಗ್ಯದಿಂದ ಕೇಳಿದ.

'ಖಂಡಿತವಾಗಿಯೂ ಅಂಕಲ್. ನನ್ನ ಲೈಟರ್ ಇದುವರೆಗೂ ಎಲ್ಲೂ ಕೈಕೊಟ್ಟಿಲ್ಲ!'

ಮುದುಕ ತನ್ನ ಕತ್ತನ್ನು ಒಂದು ಪಕ್ಕಕ್ಕೆ ವಾಲಿಸಿಕೊಂಡು ಹುಡುಗನನ್ನೇ ನೋಡತೊಡಗಿದ.

'ಒಳ್ಳೇದು, ಒಳ್ಳೇದು! ನಿನ್ನ ಈ ಮಹಾನ್ ಲೈಟರ್ ಎಂದಿಗೂ ಕೈಕೊಡುವುದಿಲ್ಲ. ಹೌದು ತಾನೆ?'

'ಹೌದು ಅಂಕಲ್, ಹೌದು.' ಹುಡುಗನ ವಯಸ್ಸು ಇಪ್ಪತ್ತೋ ಇಪ್ಪತ್ತೊಂದೋ ಆಗಿತ್ತು. ಅವನ ಮುಖದ ಮೇಲೆ ಕಂದು ಬಣ್ಣದ ಕಲೆಗಳಿದ್ದವು. ಚೂಪಾದ ಮೂಗು. ಅವನ ತೆರೆದ ಎದೆಯ ಮೇಲೂ ಹೊಂಬಣ್ಣದ ಎಳೆ ಕೂದಲುಗಳ ನಡುವೆ ಅಂತಾದ್ದೆ ಕಲೆಗಳಿದ್ದವು. 'ನನ್ನ ಲೈಟರ್ ಎಂದಿಗೂ ಕೈಕೊಡುವುದಿಲ್ಲ.' ಅವನು ಮತ್ತೊಮ್ಮೆ ಹೇಳಿದ ಮುಗುಳ್ನಗುತ್ತಾ. ಅವನ ಬಲಗೈಯಲ್ಲಿ ಲೈಟರ್ ತಯಾರಾಗಿತ್ತು.

'ಒಂದ್ನಿಮಿಷ ಕಣಪ್ಪ!' ಸಿಗಾರ್ ಹಿಡಿದ ಕೈಯನ್ನು, ಟ್ರಾಫಿಕ್ ಪೋಲಿಸನಂತೆ ಮೇಲೆತ್ತುತ್ತಾ ಮುದುಕ ಹೇಳಿದ. ಅವನ ಧ್ವನಿ ಮೃದುವಾಗಿತ್ತಾದರೂ ಭಾವರಹಿತವಾಗಿತ್ತು. ಅವನು ಹುಡುಗನನ್ನು ಒಂದು ಥರಾ ನೋಡತೊಡಗಿದ.

'ನಿನ್ನ ಲೈಟರ್ ಯಾವ ಸಂದರ್ಭದಲ್ಲೂ ಕೈಕೊಡುವುದಿಲ್ಲ, ಹೌದು ತಾನೆ? ಆಯ್ತು.